**ಸಾಕ್ಷಿಯನ್ನು ದಿನಾಂಕ 20.11.2025 ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಬಿ.ಎಸ್.ಎಸ್ ವಕೀಲರಿಂದಃ**

ನಾನು ನಾರಾಯಣಸ್ವಾಮಿ ಮತ್ತು ಇನ್ಸೂರೆನ್ಸ ಕಂಪನಿಯ ಮೇಲೆ ಕೇಸನ್ನು ಹಾಕಿದ್ದೇನೆ. ನಾರಾಯಣಸ್ವಾಮಿಯವರಿಗೆ ನೋಟಿಸ್ ಜಾರಿಯಾಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನಾರಾಯಣಸ್ವಾಮಿಯವರಿಗೆ ನೋಟಿಸ್ ಜಾರಿಯಾಗಿಲ್ಲ ಎಂದರೆ ಗೊತ್ತಿಲ್ಲ. ಅಪಘಾತಪಡಿಸಿದ ಕಾರ್ ನಂ. ಕೆಎ 07-3709 ಆಗಿದೆ. ನಾನು ಓಡಿಸುತ್ತಿರುವ ವಾಹನ ಸಂಖ್ಯೆ ಕೆಎ07-3977 ಆಗಿದೆ. ನಾನು ನನ್ನ ಡಿಎಲ್ ಕೊಟ್ಟಿದ್ದೇನೆ. ನಾನು ಚಿಂತಾಮಣಿ ಸರ್ಕಾರಿ ಆಸ್ಪತ್ರೆಯಲ್ಲಿ ಮೊದಲು ದಾಖಲಾಗಿದ್ದೆ ನಂತರ ಇಂಧ್ರಾ ಆಸ್ಪತ್ರೆ ಚಿಂತಾಮಣಿಯಲ್ಲಿ ದಾಖಲಾಗಿದ್ದೆ. ನಾನು ಹಾಜರು ಮಾಡಿದ ಮೆಡಿಕಲ್ ಬಿಲ್ ಗಳಲ್ಲಿ ಜಿಎಸ್ ಟಿ ನಂಬರ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ರಾಜೇಶ್ ಆಸ್ಪತ್ರೆಯಲ್ಲಿ ನೀಡಿದ ಓಪಿಡಿ ದಾಖಲಾತಿಯಲ್ಲಿ ಸಹ ಜಿಎಸ್ ಟಿ ನಂಬರ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಇಂಧ್ರಾ ಆಸ್ಪತ್ರೆ, ಚಿಂತಾಮಣಿ ಮತ್ತು ರಾಜೇಶ್ ಆಸ್ಪತ್ರೆಯಲ್ಲಿ ದಾಖಲಾತಿಗಳನ್ನು ನಾನು ಸೃಷ್ಠಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಎಲ್ಲಾ ದಾಖಲಾತಿಗಳನ್ನು ಅವರ ಬಳಿ ಬರಿಸಿಕೊಂಡು ನ್ಯಾಯಾಲಯಕ್ಕೆ ಹೆಚ್ಚಿನ ಪರಿಹಾರ ಪಡೆಯಲು ಹಾಕಿದ್ದೇನೆ ಎಂದರೆ ಸರಿಯಲ್ಲ. ಅಪಘಾತವಾದಾಗ ನನಗೆ 57 ವರ್ಷವಾಗಿತ್ತು. ನಾನು 2023 ರಲ್ಲಿ ನಿವೃತ್ತಿ ಹೊಂದಿದ್ದೇನೆ. ನಾನು ಹೆಚ್ಚಿನ ಪರಿಹಾರ ಪಡಲು ವೈಧ್ಯಕೀಯ ಬಿಲ್ ಗಳನ್ನು ಸೃಷ್ಠಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಚಿಂತಾಮಣಿ.